# ಮೆಸ್ಸಿ 700



ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಲ್ಲಿ 700 ಗೋಲುಗಳನ್ನು ಗಳಿಸುವುದೆಂದರೆ ಸಾಮಾನ್ಯ ಸಾಧನೆಯಲ್ಲ! ಬಾರ್ಸಿಲೋನಾ ಫುಟ್‌ಬಾಲ್ ಕ್ಲಬ್‌ನ ಲಯೊನೆಲ್ ಮೆಸ್ಸಿ ಈ ಅಸಾಮಾನ್ಯ ಸಾಧನೆಯ ಮೂಲಕ ಸುದ್ದಿಯಾಗಿದ್ದಾನೆ. ಇದರಲ್ಲಿ 630 ಗೋಲುಗಳು ಕ್ಲಬ್ ಪರವಾಗಿ ಹೊಡೆದಿದ್ದರೆ, 700 ಗೋಲುಗಳು ದೇಶದ (ಅರ್ಜೆಂಟೀನಾ) ತಂಡದ ಪರವಾಗಿ ಗಳಿಸಿದ್ದು. ಮೆಸ್ಸಿಯ ಬದ್ಧಪ್ರತಿಸ್ಪರ್ಧಿ ಕ್ರಿಶ್ಚಿಯಾನೊ ರೊನಾಲ್ಡೊ 744 ಗೋಲುಗಳನ್ನು ಗಳಿಸಿ ಗೋಲು ಗಳಿಕೆಯಲ್ಲಿ ಈತನಿಗಿಂತ ಮುಂದಿದ್ದಾನೆ. ಆದರೆ 744 ಗೋಲುಗಳನ್ನು ಗಳಿಸಲು ರೊನಾಲ್ಡೊ ಆಡಿದ್ದು 1041 ಪಂದ್ಯಗಳು. ಮೆಸ್ಸಿ 700 ಗೋಲು ಗಳಿಸಲು ಆಡಿದ್ದು 862 ಪಂದ್ಯಗಳು! "ಇಬ್ಬರಲ್ಲಿ ಯಾರು ಶ್ರೇಷ್ಠ ಆಟಗಾರ' ಎನ್ನುವ ಪ್ರಶ್ನೆಯನ್ನು ಎತ್ತಿಕೊಂಡು ಇಬ್ಬರು ಅಭಿಮಾನಿಗಳ ಮಧ್ಯೆ ಮತ್ತೆ ವಾಗ್ಯುದ್ಧ ಶುರುವಾಗಿದೆ. ಈಗಲೂ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡುತ್ತಿರುವ ಆಟಗಾರರಾಗಿರುವುದರಿಂದ ಇಬ್ಬರ ಗೋಲುಗಳಿಕೆ ಇನ್ನಷ್ಟು ಮೇಲೇರುವ ಸಂಭವವಿದೆ.

ಹಾಗೆ ನೋಡಿದರೆ ಜಗತ್ತಿನಲ್ಲಿ ಅತ್ಯಧಿಕ ಗೋಲು ಗಳಿಸಿರುವ ಮೂವರು ಆಟಗಾರರ ಪಟ್ಟಿ ಮಾಡಿದರೆ ಅದರಲ್ಲಿ ಇವರಿಬ್ಬರು ಹೆಸರೂ ಇಲ್ಲ! ಜಾಗತಿಕ ಫುಟ್‌ಬಾಲ್‌ನ ದಂತಕಥೆ ಪೆಲೆ, ರೊಮಾರಿಯೊ ಮತ್ತು ಜೋಸೆಫ್ ಬಿಕಾನ್ ಈ ಪಟ್ಟಿಯಲ್ಲಿದ್ದಾರೆ. ಪೆಲೆ ಗಳಿಸಿರುವ ಒಟ್ಟು ಗೋಲು 769. ರೊಮಾರಿಯೊ ಗಳಿಸಿದ್ದು 772. ಅತ್ಯಧಿಕ ಗೋಲು ಗಳಿಸಿರುವ ದಾಖಲೆ ಇರುವುದು ಜೋಸೆಫ್ ಬಿಕಾನ್ ಹೆಸರಲ್ಲಿ. ಆತ ಕೇವಲ 530 ಪಂದ್ಯಗಳಲ್ಲಿ 805 ಗೋಲುಗಳನ್ನು ಗಳಿಸಿರುವುದು ಸಾರ್ವಕಾಲಿಕ ದಾಖಲೆ!

ಇವೆಲ್ಲ ಅಂಕಿ ಸಂಖ್ಯೆಗಳ ಮಾತಾಯಿತು. ಅದರ ಹೊರತಾಗಿಯೂ ಮೆಸ್ಸಿಯ ಫುಟ್‌ಬಾಲ್ ಬದುಕಿನಲ್ಲಿ ಸ್ಮರಣೀಯ ಸಂಗತಿಗಳು ಹೇರಳವಾಗಿವೆ. ಕಳೆದ ತಿಂಗಳು 24ರಂದು 33 ತುಂಬಿ 34ಕ್ಕೆ ಕಾಲಿಟ್ಟಿರುವ ಮೆಸ್ಸಿ, ಬಾಲ್ಯದಲ್ಲಿ ಹಾರ್ಮೋನ್ ಕೊರತೆಯಿಂದ ಬಳಲುತ್ತಿದ್ದವನು. ಫುಟ್‌ಬಾಲ್‌ನಲ್ಲಿ ಎತ್ತರದ ಆಟಗಾರನಿಗೆ ಹೆಚ್ಚು ಮನ್ನಣೆ. (ಈ ಲೋಕನಿಯಮಕ್ಕೆ ಮರಡೊನಾ ಸಹಿತ ಕೆಲವು ಆಟಗಾರರ ಅಪವಾದಗಳೂ ಇವೆ.) 8ರ ಎಳವೆಯಲ್ಲೇ ಫುಟ್‌ಬಾಲ್ ಕ್ಲಬ್ ಸೇರಿದ್ದ ಮೆಸ್ಸಿ ಇತರ ಬಾಲಕರಿಗಿಂತ ತುಂಬ ಕಡಿಮೆ ಎತ್ತರ ಹೊಂದಿದ್ದ. ಹಾರ್ಮೋನ್ ಇಂಜೆಕ್ಷನ್‌ಗಳ ಮೂಲಕ ಬಾಲಕನ ಎತ್ತರ ಹೆಚ್ಚಿಸಲು ಪೋಷಕರು ಪ್ರಯತ್ನಿಸಿದರೂ ಅದು ತುಂಬಾ ದುಬಾರಿಯಾಗಿತ್ತು. ಪ್ರತಿ ತಿಂಗಳೂ ನೂರಾರು ಡಾಲರ್ ಔಷಧಿಗಾಗಿ ಖರ್ಚು ಮಾಡಲು ಅವರ ಬಳಿ ಶಕ್ತಿ ಇರಲಿಲ್ಲ. ಆದರೆ 13ರ ಹರೆಯದಲ್ಲಿ ಮೆಸ್ಸಿಯ ನೆರವಿಗೆ ಬಂದದ್ದು ಬಾರ್ಸಿಲೋನಾ ಕ್ಲಬ್‌ನ ಯೂತ್ ಅಕಾಡೆಮಿ ಲಾ ಮಾಸಿಯಾ. ಫುಟ್‌ಬಾಲ್ ತರಬೇತಿ ನೀಡುವುದರ ಜೊತೆಗೆ ಆತನ ವೈದ್ಯಕೀಯ ವೆಚ್ಚವನ್ನೂ ಭರಿಸಲು ಅದು ಒಪ್ಪಿಕೊಂಡಿತು.

ಮೆಸ್ಸಿಯ ಎತ್ತರ 5 ಅಡಿ 7 ಇಂಚು. ಯೂರೋಪಿನ ಬಹುತೇಕ ಫುಟ್‌ಬಾಲಿಗರು ಆರೂವರೆ ಅಡಿ ಮೇಲಿರುವವರೇ. ಆದರೆ ಮೆಸ್ಸಿ ತನ್ನ ವೇಗ ಮತ್ತು ದಣಿವರಿಯದ ನಿರಂತರ ದಾಳಿಯಿಂದಾಗಿ ದಾಖಲೆಗಳ ಮೇಲೆ ದಾಖಲೆಗಳನ್ನು ಬರೆಯುತ್ತಲೇ ಬಂದ. ಈತನ ಈ ಆಟದ ಶೈಲಿಯಿಂದಾಗಿ ಅಷ್ಟೇ ಕುಳ್ಳಗಿದ್ದ ಡಿಯಾಗೊ ಮರೆಡೊನಾ ಜೊತೆಗೆ ಹೋಲಿಕೆ ನಡೆಯುತ್ತಿದೆ.

13ನೇ ವಯಸ್ಸಿನಲ್ಲಿ ಬಾರ್ಸಿಲೋನಾ ಕ್ಲಬ್ ಜೊತೆ ಆಟಕ್ಕೆ ಸಹಿ ಹಾಕಿದ ಮೆಸ್ಸಿ ಇವತ್ತಿಗೂ ಆ ಕ್ಲಬ್‌ನ ಬಹುದೊಡ್ಡ ಆಸ್ತಿ. 2005ರಲ್ಲಿ 16ರ ಹರೆಯದಲ್ಲಿ ಕ್ಲಬ್ ಪರವಾಗಿ ಮೊದಲ ಅಂತರರಾಷ್ಟ್ರೀಯ ಪಂದ್ಯವಾಡಿದ ಈತ ಗಳಿಸಿದ ಮೊದಲ ಗೋಲು ಇವತ್ತಿಗೂ ಅತ್ಯಂತ ಕಡಿಮೆ ಪ್ರಾಯದ ಆಟಗಾರನೊಬ್ಬನ ಗೋಲು ಎಂದು ವಿಶ್ವದಾಖಲೆಯಲ್ಲಿದೆ. ಅದೇ ವರ್ಷ ಅರ್ಜೆಂಟೀನಾ ದೇಶದ 20ರೊಳಗಿನವರ ತಂಡದ ನಾಯಕತ್ವವೂ ಸಿಕ್ಕಿದ್ದು ಮೆಸ್ಸಿಯ ಇಮೇಜನ್ನು ಬದಲಾಯಿಸಿತು. 2009ರಲ್ಲಿ ಬಾರ್ಸಿಲೋನಾ ಕ್ಲಬ್‌ಗೆ ಚಾಂಪಿಯನ್ಸ್ ಲೀಗ್, ಲಾ ಲಿಗಾ ಮತ್ತು ಸ್ಪ್ಯಾನಿಶ್ ಸೂಪರ್ ಕಪ್ ಪ್ರಶಸ್ತಿಗಳನ್ನು ಗೆದ್ದುಕೊಟ್ಟದ್ದು ಖ್ಯಾತಿಯನ್ನು ಇನ್ನಷ್ಟು ಹೆಚ್ಚಿಸಿತು. ಅದೇ ವರ್ಷ ಫಿಫಾದ 'ವರ್ಷದ ವಿಶ್ವ ಆಟಗಾರ' ಮೊದಲ ಬಾರಿಗೆ ಗೆದ್ದುಕೊಂಡದ್ದು. ಅಲ್ಲಿಂದೀಚೆಗೆ ಮೆಸ್ಸಿಯದ್ದು ಸದಾ ಗೆಲುವಿನ ಓಟ.

ಬಾರ್ಸಿಲೋನಾ ಕ್ಲಬ್ ಪರವಾಗಿ ಅತ್ಯಧಿಕ ಗೋಲು ಗಳಿಸಿರುವ ಕೀರ್ತಿ, ಆರು ಸಲ 'ವರ್ಷದ ವಿಶ್ವ ಫುಟ್‌ಬಾಲ್ ಆಟಗಾರ' ಪ್ರಶಸ್ತಿ, ಆರು ಸಲ 'ಯೂರೋಪಿಯನ್ ಗೋಲ್ಡನ್ ಶೂ' ಪ್ರಶಸ್ತಿ ಹೀಗೆ ಮೆಸ್ಸಿಯ ಸಾಮರ್ಥ್ಯಕ್ಕೆ ಸಂದ ಗೌರವಗಳು ಹಲವಾರು. 'ರೊನಾಲ್ಡೋಗೆ ಸಿಕ್ಕಿರುವುದು ನಾಲ್ಕೇ ಗೋಲ್ಡನ್ ಶೂ' ಎಂದೂ ಮೆಸ್ಸಿ ಬೆಂಬಲಿಗರು ಆಗಾಗ್ಗೆ ಪ್ರತಿಸ್ಪರ್ಧಿಯನ್ನು ಕಿಚಾಯಿಸುವುದುಂಟು.

ಜಗತ್ತಿನ ಅತಿ ಶ್ರೀಮಂತ ಫುಟ್‌ಬಾಲಿಗರ ಪಟ್ಟಿಯಲ್ಲಿ ಮೆಸ್ಸಿಯ ಹೆಸರೂ ಮುಖ್ಯವಾದದ್ದು. ವಾರಕ್ಕೆ 6.67 ಲಕ್ಷ ಡಾಲರ್ ಗಳಿಕೆ. 2017ರಲ್ಲಿ ಕ್ಲಬ್ ಜೊತೆ ನಾಲ್ಕು ವರ್ಷಗಳ ಒಪ್ಪಂದ ನವೀಕರಣಕ್ಕೆ ಸಹಿ ಹಾಕಿದಾಗ ಪಡೆದ ಬೋನಸ್ 59.6ದಶಲಕ್ಷ ಡಾಲರ್. ಮೆಸ್ಸಿಯನ್ನು ಬೇರೆ ಕ್ಲಬ್‌ನವರು ಈಗ ಖರೀದಿಸಬೇಕೆಂದರೆ ಬಾರ್ಸಿಲೋನಾ ಕ್ಲಬ್‌ಗೆ 835 ದಶಲಕ್ಷ ಡಾಲರ್ ಕೊಡಬೇಕು. 700 ಗೋಲುಗಳೆಂದರೆ ಸುಮ್ಮನೆ ಅಲ್ಲ!

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65